# 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ

## ಸಿಸಿ ಸಂಖ್ಯೆ: 1084/2019

**ಪಿರ್ಯಾದಿದಾರರು:** ರಾಜ್ಯ ಪರ ಪೊಲೀಸರು,
ಹಿರೀಸಾವೆ ಪೋಲೀಸರು

**ವಿರುದ್ಧ**

**ಆರೋಪಿತರು:**
1. ಮಂಜಬೋವಿ ಬಿನ್ ಗುರುವಬೋವಿ
ಸುಮಾರು 45 ವರ್ಷ ವಯಸ್ಸು
2. ರತ್ನಮ್ಮ ಕೋಂ ಮಂಜಬೋವಿ
ಸುಮಾರು 35 ವರ್ಷ ವಯಸ್ಸು
3. ಅಶೋಕ ಬಿನ್ ನಟರಾಜಪ್ಪ
ಸುಮಾರು 35 ವರ್ಷ ವಯಸ್ಸು
ಎಲ್ಲರ ವಾಸ: ಗಿರಿಕ್ಷೇತ್ರ ಗ್ರಾಮ, ಹಿರೀಸಾವೆ ಹೋಬಳಿ
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅಡಿಯಲ್ಲಿ ಆರೋಪಿತರ ಹೇಳಿಕೆ

**ಪ್ರಶ್ನೆ 1** ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ ?

**ಉತ್ತರ** :-

**ಪ್ರಶ್ನೆ 2** ಫ್ರಾಸಾ-1 ವೆಂಕಟೇಶ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 26.07.2019ರಂದು ಸಂಜೆ 3.30 ಗಂಟೆ ಸಮಯದಲ್ಲಿ ಚಾಸಾ 2ರವರ ಮನೆಯ ಮುಂದೆ ತಮ್ಮ ಮನೆ ಕಡೆಗೆ ಹೋಗುತ್ತಿದ್ದಾಗ, ಆರೋಪಿತರು ಸೂಳೇಮಗ ಇವನನ್ನು ಹೊಡೆದುಹಾಕು ಇವನಿಂದ ನಮ್ಮ ಜಮೀನು ಹಾಳಾಗುತ್ತದೆ ಎಂದು ಹೇಳಿ 1ನೇ ಆರೋಪಿ ದೊಣ್ಣೆಯಿಂದ ತನ್ನ ತಲೆಗೆ ಹೊಡೆದಿದ್ದು, 3 ಮತ್ತು 4ನೇ ಆರೋಪಿತರು ದೊಣ್ಣೆಯಿಂದ ತನ್ನ ಮೈಕೈಗೆ ಹೊಡೆದಿದ್ದು, ಚಾಸಾ 2ರವರು ಬಿಡಿಸಲು ಬಂದಾಗ ಅವರಿಗೂ ಸಹ 1ನೇ ಆರೋಪಿಯು ದೊಣ್ಣೆಯಿಂದ ತಲೆಬುರುಡೆಗೆ ಹೊಡೆದಿದ್ದು, ನಂತರ ಚಾಸಾ 3ರವರು ಮನೆಯಿಂದ ಓಡಿಬಂದು ಬಿಡಿಸಲು ಬಂದಾಗ 2ನೇ ಆರೋಪಿಯು ಅವರಿಗೆ ಕೈಯಿಂದ ಹೊಡೆದು ಕಾಲಿನಿಂದ ಒದ್ದಿದ್ದು, ನಂತರ ಆರೋಪಿತರು ತಮ್ಮ ಜಮೀನಿನ ತಂಟೆಗೆ ಬಂದರೆ ತನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ನಂತರ ಚಾಸಾ 5 ಮತ್ತು ತಮ್ಮಯ್ಯ ಅವರು ಆಂಬುಲೆನ್ಸ್‌ಗೆ ಕರೆ ಮಾಡಿ ಹಿರೀಸಾವೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ಅದೇ ದಿನ ಪೋಲೀಸರು

ಆಸ್ಪತ್ರೆಗೆ ಬಂದು ತನ್ನ ಹೇಳಿಕೆ ಪಡೆದುಕೊಂಡಿದ್ದಾಗಿ ಪಂಚನಾಮೆ ಮತ್ತು ಮು ಮಾ 1 ರಿಂದ 3ನ್ನು ಗುರುತಿಸಿ ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 3** ಫ್ರಾಸಾ–2 ಲೋಕೇಶ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2019ರಲ್ಲಿ ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಚಾ ಸಾ 1ರವರು ತಮ್ಮ ಮನೆಯ ಹತ್ತಿರ ಬರುತ್ತಿದ್ದಾಗ, 1 ರಿಂದ 4ನೇ ಆರೋಪಿತರು ಸೇರಿ ಚಾಸಾ 1ರವರನ್ನು ದೊಣ್ಣೆಯಿಂದ ಹೊಡೆಯುತ್ತಿದ್ದು ತಾನು ಬಿಡಿಸಲು ಹೋದಾಗ ತನಗೂ ಸಹ ಆರೋಪಿತರು ದೊಣ್ಣೆಯಿಂದ ಮೈ ಕೈಗೆ ಹೊಡೆದಿದ್ದು, ನಂತರ ಚಾಸಾ 1ರವರ ಪತ್ನಿ ಚಾ ಸಾ 3ರವರು ಬಿಡಿಸಲು ಬಂದಾಗ ಅವರಿಗೂ ಸಹ ಆರೋಪಿತರು ದೊಣ್ಣೆಯಿಂದ ಮತ್ತು ಕೈಯಿಂದ ಹೊಡೆದಿದ್ದು, ನಂತರ ತಮ್ಮನ್ನು ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಈ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 4** ಫ್ರಾಸಾ–3 ಪುಷ್ಪಲತಾ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 26.07.2019ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಚಾಸಾ 1ರವರು ಚಾ ಸಾ 2ರವರ ಮನೆಯ ಹತ್ತಿರ ತಮ್ಮ ಮನೆಯ ಕಡೆಗೆ ಬರುತ್ತಿದ್ದಾಗ, ಆರೋಪಿತರು ಚಾ ಸಾ 1ರವರಿಗೆ ಕೋಲಿನಿಂದ ಹೊಡೆದಿದ್ದು, ನಂತರ ತಾನು ಬಂದಾಗ ಚಾಸಾ 2 ಮತ್ತು 1ರವರಿಗೆ ಆರೋಪಿತರು ದೊಣ್ಣೆಯಿಂದ ಹೊಡೆಯುತ್ತಿದ್ದು ತಾನು ಜಗಳ ಬಿಡಿಸಲು ಹೋದಾಗ 2ನೇ ಆರೋಪಿಯು ತನಗೆ ಕೈಯಿಂದ ಹೊಡೆದು ಕಾಲಿನಿಂದ ಒದ್ದಿರುತ್ತಾರೆ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಜಮೀನಿನ ವಿಷಯಕ್ಕೆ ಬಂದರೆ ನಿಮ್ಮನ್ನು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಚಾಸಾ 4 ಮತ್ತು 6 ರವರು ಜಗಳವನ್ನು ಬಿಡಿಸಿ ಆಂಬುಲೆನ್ಸ್ ಗೆ ಕರೆ ಮಾಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಈ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 5** ಫ್ರಾಸಾ–4 ಗಂಗಮ್ಮ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 26.05.2019 ರಂದು ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ಗಿರಿಕ್ಷೇತ್ರ ಕಡೆಯಿಂದ ಚಾಸಾ 1 ರವರು ಬರುತ್ತಿದ್ದಾಗ ಜಮೀನಿನ ವಿಷಯದಲ್ಲಿ 1 ರಿಂದ 4ನೇ ಆರೋಪಿತರು ಚಾಸಾ 1ರವರಿಗೆ ಹೊಡೆಯುತ್ತಿದ್ದು ಜಗಳ ನಡೆಯುತ್ತಿರುವಾಗ ತಾನು, ಚಾ ಸಾ 5 ಮತ್ತು 6ರವರು ಹೋಗಿ ಜಗಳ ಬಿಡಿಸಿದ್ದು, ಆರೋಪಿತರು ಚಾಸಾ 1ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು ಚಾ ಸಾ 1ರವರು ಇದ್ದರೆ ತಾನೆ ಜಮೀನಿನ ವಿಚಾರದಲ್ಲಿ ಗಲಾಟೆಯಾಗುವುದು ಎಂದು ಹೇಳಿ ಆರೋಪಿತರು ಕೈಯಿಂದ ಚಾಸಾ 1ರವರಿಗೆ ಹೊಡೆದಿದ್ದು, ಚಾಸಾ 3ರವರು ಯಾಕೆ ತನ್ನ ಗಂಡನನ್ನು ಹೊಡೆಯುತ್ತಿದ್ದೀರಾ ಎಂದು ಕೇಳಿದಾಗ ಆರೋಪಿತರು ಚಾಸಾ 3ರವರಿಗೆ ಸಹ

ದೊಣ್ಣೆಯಿಂದ ಹೊಡೆದಿದ್ದು, ನಂತರ ಜಗಳ ಬಿಡಿಸಿ ಆಂಬುಲೆನ್ಸ್ ಗೆ ಕರೆ ಮಾಡಿ ಹಿರಿಸಾವೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 6** ಫ್ರಾಸಾ–4 ಗಂಗಮ್ಮ ಇವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ *27.05.2019*ರಂದು ಪೋಲೀಸರು ಕೃತ್ಯ ಸ್ಥಳಕ್ಕೆ ಮಹಜರ್ ಗೆ ಬಂದಿದ್ದು, ತಾನು ಕೃತ್ಯ ಸ್ಥಳವನ್ನು ತೋರಿಸಿದ ಮೇರೆಗೆ ಪೋಲೀಸರು ತನ್ನ, ಚಾಸಾ *5* ಮತ್ತು *6*ರವರ ಸಮಕ್ಷಮ ಬೆಳಿಗ್ಗೆ *11.35* - ಮಧ್ಯಾಹ್ನ *12.30* ರವರೆಗೆ ಮಹಜರ್ ಕ್ರಮ ಜರುಗಿಸಿದ್ದು, ಅಲ್ಲೇ ಬಿದ್ದಿದ್ದ *3* ದೊಣ್ಣೆಯನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿದ್ದು, ಆರೋಪಿತರನ್ನು ನೋಡಿ ಗುರುತಿಸಿ ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 7** ಫ್ರಾಸಾ–5 ಗಿರೀಶ್ ಕೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಸಾಕ್ಷಿ ನಿ ಪಿ 2 ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ಗೆ ನಿಪಿ 2(ಬಿ) ಎಂದು, ದಿನಾಂಕ 27.05.2019ರಂದು ಬೆಳಿಗ್ಗೆ 11.35 – 12.30ರವರೆಗೆ ಪೋಲೀಸರು ಚಾಸಾ 2 ಮತ್ತು 5ರವರು ಸ್ಥಳ ತೋರಿಸಿದ ಮೇರೆಗೆ 1ನೇ ಆರೋಪಿ ಮತ್ತು ಚಾ ಸಾ1ರವರಿಗೆ ಗಲಾಟೆಯಾದ ವಿಚಾರವಾಗಿ ಮಹಜರ್ ಗೆ ಬಂದಾಗ ಚಾಸಾ 4 ಮತ್ತು 6ರವರೊಂದಿಗೆ ಸಹಿ ಮಾಡಿದ್ದು, ನ್ಯಾಯಾಲಯದ ಮುಂದಿರುವ ಎಂ ಒ 1 ರಿಂದ *3*ನ್ನು ನೋಡಿ ಪೋಲೀಸರು ಅಮಾನತ್ತುಪಡಿಸಿಕೊಂಡಿರುವ ದೊಣ್ಣೆಗಳು ಎಂದು ಗುರುತಿಸಿ ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 8** ಫ್ರಾಸಾ–6 ಡಾಃ ಶಿವಸ್ವಾಮಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 26.05.2019 ರಂದು ಸಂಜೆ ಸುಮಾರು 05.10 ಗಂಟೆಯ ಸಮಯದಲ್ಲಿ ಚಾಸಾ–1 ರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಪರೀಕ್ಷಿಸಲಾಗಿ ತಲೆಯ ಬಲಭಾಗದಲ್ಲಿ ನೋವಿನಿಂದ ಕೂಡಿದ ಗಾಯ, ಎಡಭುಜದಲ್ಲಿ ನೋವು, ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಈ ಬಗ್ಗೆ ತಾನು ಗಾಯದ ಪ್ರಮಾಣ ಪತ್ರವನ್ನು ನಿಪಿ 3 ಹಾಗೂ ತನ್ನ ಸಹಿಯನ್ನು ನಿಪಿ 3 (ಎ) ಎಂದು ಗುರುತಿಸಿ, ದಿಃ 26.05.2019 ರಂದು ಸಂಜೆ ಸುಮಾರು 05.00 ಗಂಟೆಯ ಸಮಯದಲ್ಲಿ ಚಾಸಾ–2 ರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಪರೀಕ್ಷಿಸಲಾಗಿ ಬಲಭುಜದಲ್ಲಿ ನೋವು ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಈ ಬಗ್ಗೆ ತಾನು ಗಾಯದ ಪ್ರಮಾಣ ಪತ್ರವನ್ನು ನಿಪಿ 4 ಹಾಗೂ ತನ್ನ ಸಹಿಯನ್ನು ನಿಪಿ 4 (ಎ) ಎಂದು ಗುರುತಿಸಿದ್ದು, ನಿ ಪಿ 3 ಮತ್ತು 4ರಲ್ಲಿ ಕಂಡು ಬಂದಂತಹ ಗಾಯಗಳು ಯಾವುದೇ ಒಬ್ಬ ವ್ಯಕ್ತಿ ಎಂ ಒ 1 ರಿಂದ 3ರಲ್ಲಿ

ಹಲ್ಲೆ ಮಾಡಿದ ಸಂದರ್ಭದಲ್ಲಿ ಆಗಿರುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 9** ಪ್ರಾಸಾ-7 ಶಂಕರ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 26.05.2019ರಂದು ಮಧ್ಯಾಹ್ನ 3 ರಿಂದ 3-30ರ ಸಮಯದಲ್ಲಿ ತಾನು ಚಾಸಾ-2ರವರ ಮನೆಯಲ್ಲಿದ್ದಾಗ ಆರೋಪಿಗಳು, ಚಾಸಾ-1 ಮತ್ತು 2 ರವರು ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ಮಾಡುತ್ತಿದ್ದು, ತಾನು ಹೋಗುವಷ್ಟರಲ್ಲಿ ಗಲಾಟೆ ಜಾಸ್ತಿಯಾಗಿದ್ದು ಚಾಸಾ-4, 6 ಮತ್ತು ತಾನು ಸೇರಿ ಜಗಳ ಬಿಡಿಸಿದ್ದು, ಚಾಸಾ-2ರವರಿಗೆ 1ನೇ ಆರೋಪಿಯು ದೊಣ್ಣೆಯಿಂದ ತಲೆಗೆ ಹೊಡೆದ ಪರಿಣಾಮ ಚಾಸಾ-2ರವರು ಸ್ಥಳದಲ್ಲೇ ಪ್ರಜ್ಞೆ ತಪ್ಪಿದ್ದರಿಂದ 1ನೇ ಆರೋಪಿಯು ಸ್ಥಳದಿಂದ ಹೊರಟು ಹೋಗಿದ್ದು, ನಂತರ ಚಾಸಾ-1 ಮತ್ತು 2 ರವರನ್ನು ಹಿರಿಸಾವೆ ಆಸ್ಪತ್ರೆಗೆ ಆಂಬುಲೆನ್ಸ್ ನಲ್ಲಿ ಕಳುಹಿಸಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 10** ಪ್ರಾಸಾ-7 ಶಂಕರ್ ಇವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ, ಗಲಾಟೆಯಾದ ಮರುದಿನ ಪೊಲೀಸರು ಬೆಳಿಗ್ಗೆ 11-30 ಸಮಯದಲ್ಲಿ ಗಲಾಟೆಯ ಬಗ್ಗೆ ವಿಚಾರಿಸಲು ತನ್ನನ್ನು ಹುಡುಕಿಕೊಂಡು ಬಂದಿದ್ದು, ಗಲಾಟೆಯಾದ ಸ್ಥಳವನ್ನು ಪೊಲೀಸರಿಗೆ ತಾನೇ ತೋರಿಸಿದ್ದು, ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿ 3 ದೊಣ್ಣೆಗಳನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಗೆ ಚಾಸಾ-4, 6 ಮತ್ತು ತಾನು ಸಹಿ ಮಾಡಿದ್ದು, ಸದರಿ ಮಹಜರನ್ನು ಬೆಳಿಗ್ಗೆ 11 ರಿಂದ 11-30ರವರೆಗೆ ಬರೆದಿದ್ದು, ನಿ.ಪಿ.2ಕ್ಕೆ ನಿ.ಪಿ.2(ಸಿ) ಎಂದು ಸಹಿ ಮಾಡಿದ್ದಾಗಿ, ನ್ಯಾಯಾಲಯದ ಮುಂದಿರುವ 3 ದೊಣ್ಣೆಗಳನ್ನು ನೋಡಿ ಆ ದಿನ ಪೊಲೀಸರು ಅಮಾನತ್ತುಪಡಿಸಿಕೊಂಡ ದೊಣ್ಣೆಗಳಾಗಿರುತ್ತವೆ ಎಂದು ಗುರುತಿಸಿದ್ದು ಘಟನೆಯ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದು, ಸಾಕ್ಷಿಯು ಆರೋಪಿಗಳನ್ನು ನೋಡಿ ಗುರುತಿಸಿದ್ದಾಗಿ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆ: 11** ಪ್ರಾಸಾ-8 ಸುಭಾಷ್ ಚಂದ್ರ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ **26.05.2019** ರಂದು ಠಾಣಾ ಪ್ರಭಾರದಲ್ಲಿದ್ದಾಗ ಹಿರೀಸಾವೆ ಸರ್ಕಾರಿ ಆಸ್ಪತ್ರೆಯಿಂದ ಬಂದ ಮೆಮೋವನ್ನು ಪಡೆದು ಆಸ್ಪತ್ರೆಗೆ ಹೋಗಿ ಗಾಯಾಳು ಚಾಸಾ**-1**ರವರ ಹೇಳಿಕೆಯನ್ನು ರಾತ್ರಿ **7.15** ರಿಂದ **7.45**ರವರೆಗೆ ಪಡೆದು ರಾತ್ರಿ **8**ಗಂಟೆಗೆ ಠಾಣೆಗೆ ಹಾಜರಾಗಿ ಠಾಣಾ ಮೊ.ನಂ. **34/19**ರಂತೆ ಭಾ.ದಂ.ಸಂಹಿತೆ ಕಲಂ **323, 324, 504, 506** ಸಹವಾಚಕ **34** ರ ರೀತ್ಯ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಮಾಹಿತಿಯನ್ನು ಇಲಾಖಾ

ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದು ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-9ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆಃ 12** ಫ್ರಾಸಾ-9 ಗಿರೀಶ್ ಕೆ ಎನ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 27.05.2019 ರಂದು ಚಾಸಾ-8ರವರಿಂದ ಕಡತವನ್ನು ಪಡೆದು ಪರಿಶೀಲಿಸಿದ್ದು, ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-5ರವರು ಸ್ಥಳ ತೋರಿಸಿದ್ದು, ಪಂಚರಾದ ಚಾಸಾ-4 ಮತ್ತು 6ರವರ ಸಮಕ್ಷಮ ಬೆಳಿಗ್ಗೆ 11-35 ರಿಂದ 12-30ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ ಚಾಸಾ-5ರವರು ಹಾಜರುಪಡಿಸಿದ 3 ಕಾಡುಜಾತಿಯ ದೊಣ್ಣೆಗಳನ್ನು ಅಮಾನತ್ತುಪಡಿಸಿದ್ದು, ನಂತರ ಠಾಣೆಗೆ ಬಂದು ಸದರಿ ದೊಣ್ಣೆಗಳನ್ನು ಮಾಲುಪಟ್ಟಿ ಸಂಖ್ಯೆ 34/19ರಂತೆ ನಮೂದಿಸಿ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು, ನಂತರ ಅದೇ ಚಾಸಾ-4 ಮತ್ತು 5ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆಃ 13** ಫ್ರಾಸಾ-9 ಗಿರೀಶ್ ಕೆ ಎನ್ ಇವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ **06.07.2019**ರಂದು ಚಾಸಾ-**2** ಮತ್ತು **3**ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು**,** ದಿಃ **03.09.2019**ರಂದು ಚಾಸಾ-**1** ಮತ್ತು **2**ರವರ ಗಾಯದ ಪ್ರಮಾಣಪತ್ರಗಳನ್ನು ಚಾಸಾ-**7**ರವರಿಂದ ಪಡೆದುಕೊಂಡಿದ್ದು**,** ಅದೇ ದಿನ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದು**,** ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 3 ಅನ್ನು ನೋಡಿ ಸಾಕ್ಷಿಯು ಗುರುತಿಸಿದ್ದಾಗಿ ಎಂದು ಸಾಕ್ಷ್ಯನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ**

**ಪ್ರಶ್ನೆಃ 14** ನೀವು ಏನಾದರೂ ಹೇಳಲು ಬಯಸುತ್ತೀರಾ ?

**ಉತ್ತರ :-**

**ಪ್ರಶ್ನೆಃ 15** ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

**ಉತ್ತರ :-**

*(ಈ ಮೇಲ್ಕಂಡ ಅಪರಾಧವನ್ನು ಸೂಚಿಸುವ ಸಂಗತಿಗಳನ್ನು ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿವರಿಸಿ, ಆರೋಪಿತರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.)*

**ದಿನಾಂಕಃ** 20.05.2026

**(ಮಧುಶ್ರೀ ಆರ್. ಎಂ )**
**3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**